ಆದಿನಾರಾಯಣಮುನಿ, ಕೊಳ್ಳೇಗಾಲ
ದಂಪತಿಗಳಿಬ್ಬರು ಒಂದೇ ಮೊಬೈಲಿನಲ್ಲಿ ಎರಡು ಸಿಮ್ ಬಳಸುತ್ತಿದ್ದಾರಲ್ಲ...?



ಗುಡ್. ಒಬ್ಬರು ಮಾತನಾಡುವಾಗ ಇನ್ನೊಬ್ಬರು ಸುಮ್ಮನಿರಬೇಕೆಂದು ಅರಿತಿರುವ ಸಭ್ಯರು!

ಅಂಬುಜ ಹೆಚ್.ಎಂ. ಮೈಸೂರು
ಮಸಿ ಇಡೀ ಬಣ್ಣವನ್ನು ನುಂಗುವುದಕ್ಕೂ, ಇಡೀ ಬಣ್ಣ ಬಿಳಿಹಾಳೆಯನ್ನು ತುಂಬುವುದಕ್ಕೂ ವ್ಯತ್ಯಾಸ?
ಇದು ಚಿತ್ರಕ್ಕೆ ಬೇಡವಾದ ಚಿತ್ತು (ಛೀ ಥೂ ಸಹ!); ಅದು ಚಿತ್ತಾರ.

ಶಿವಕುಮಾರ್ ಕಾಳೀಹುಂಡಿ, ಮೈಸೂರು
ಹೆಂಡತಿ ತವರಿಗೆ ಹೋಗುವುದಕ್ಕೂ ಗಂಡ ತನ್ನ ಮನೆಗೇ ಬರುವುದಕ್ಕೂ ವ್ಯತ್ಯಾಸವೇನು?
ಅಲ್ಲಿಗೆ ಹೋಗುವುದು ಕುಣಿಕುಣಿದು. ಇಲ್ಲಿಗೆ ದಣಿದಣಿದು.

ಕುಸುಮ, ಮೈಸೂರು
ಹೆಣ್ಣು ಮೇಕಪ್ ಮಾಡಿಕೊಳ್ಳುವುದಕ್ಕೆ, ಗಂಡು ಕುಡಿದು ಕನ್ನಡಕ ಧರಿಸುವುದಕ್ಕೆ, ರಾಜಕಾರಣಿಯ ಮೆದುಳಿಗೆ ಸಂಬಂಧ ಏನು?



ಮೂರೂ ಸತ್ಯವನ್ನು ಮರೆಮಾಚುವ ಗುಣದವೇ.

ಬಿ.ಚಂದ್ರೇಗೌಡ, ಬೆಂಗಳೂರು
ಅಡಿಗಲ್ಲು ಹಾಕುವುದಕ್ಕೂ ಅಡುಗೆ ಮಾಡುವುದಕ್ಕೂ ಏನು ವ್ಯತ್ಯಾಸ?
ಅದು ಉದ್ಘಾಟನೆ; ಇದು ಉದ್ದಕ್ಕೂ ಇರುವ ಘಟನೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ನಮ್ಮ ಮನಸ್ಸಿನ ಗೊಂದಲಗಳನ್ನು ಯಾರ ಜೊತೆ ಹಂಚಿಕೊಳ್ಳಬೇಕು?
ಸುದ್ದಿವಾಹಿನಿಗಳನ್ನು ಬಿಟ್ಟು ಇನ್ನೆಲ್ಲಿಯೂ ಆಗಬಹುದು.

ಅನಘಾ, ಮೈಸೂರು
ಗಂಡ ಯಾರ ಕೈಕೆಳಗೂ ಕೆಲಸ ಮಾಡುವುದಿಲ್ಲವೆಂದು ದುಡಿದು ಹೆಂಡತಿಯನ್ನು ನೌಕರಿಗೆ ಕಳುಹಿಸುವುದೇಕೆ?
ಇದು ಅಡುಗೆಮನೆಯಲ್ಲಿ ಪುರುಷಸಮಾನತೆ ಪಡೆಯಲು ನಡೆಸಿರುವ ಹೋರಾಟವಂತೆ.

ಶೃತಿ ರಿಗ್ರೆಟ್ ಐಯ್ಯರ್, ಕೆನಡಾ
ನಿಮಗೆ ಮನೆ–ಮಠ ಇದೆಯಾ ಅಂತಾರಲ್ಲ, ಮನೆಯೇನೋ ಸರಿ, ಮಠ ಯಾಕೆ?
ಮನೆ ದೇಹದ ವಿಲಾಸ; ಮಠ ಧರ್ಮದ ವಿಳಾ(ಲಾ)ಸ.

ಅನಿರುದ್ಧ, ಮೈಸೂರು
ರಾಜಕಾರಣಿಗಳು ತಮ್ಮ ಕೆಲಸ ಮಾಡಿಕೊಳ್ಳಲು ಯಾರಿಗೆ ಲಂಚ ಕೊಡುತ್ತಾರೆ?
ವೈಷ್ಣೋದೇವಿ, ಗ್ರಾಮದೇವತೆ, ಮಲೆಯಾಳಿ ಮಾಂತ್ರಿಕ, ಜ್ಯೋತಿಷಿ...

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಹುಡುಗಿ ಪ್ರೀತಿಸುವಾಗ ಕೇಸರಿಬಾತ್ ಇದ್ದಂತೆ. ಮದುವೆ ಆದಮೇಲೆ?
ಆಗಲೂ ಕೇಸರಿಬಾತೇ; ಅತ್ತೆ/ಪತಿಗೆ ಮಧುಮೇಹಿ ಕಾಟವಷ್ಟೆ.

ರಾಜೀವ್ ಎನ್ ಮಾಗಲ್, ಸಕಲೇಶಪುರ
ಭೂಮಿ ಉಳುವವನೇ ಒಡೆಯ ಎಂದಂತೆ ಕ್ಯಾಬ್ ಓಡಿಸುವವನೇ ಮಾಲಿಕ ಎಂದರೆ?
ಪಂಕ್ಚರ್ ಹಾಕುವವನೇ ಟೈರಿನೊಡೆಯ ಎಂದಾಗಿ ಬದುಕೇ ಕಷ್ಟವಾಗುತ್ತದೆ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ಸಮಸ್ಯೆ ಇಲ್ಲದ ಸಂಸಾರ ಮಾಡಬೇಕಲ್ಲ ರಾಮ್?
ಅಂದರಿಕೂ ಮಂಚಿವಾಡು ಆಗಿಬಿಡಿ.

ಹೆಚ್.ವಿ. ರಂಗನಾಥ, ಬೆಂಗಳೂರು
ಹೆಚ್ಚಿನ ವಾಹಿನಿಯವರು 'ಬ್ರೇಕಿಂಗ್ ನ್ಯೂಸ್' ಎಂದು ಹಳಸಿದ ಸುದ್ದಿ ಪ್ರಸಾರ ಮಾಡುವರಲ್ಲ?
'ಹೆಡ್' ಬಿಟ್ಟಿರುತ್ತಾರೆ. ಅದು ಕೇಳುವವರ ತಲೆ ಪಟಪಟನೆ ಶೂಲೆಗೊಳ್ಳುವ ಹೆಡ್ ಬ್ರೇಕಿಂಗ್ ನ್ಯೂಸ್.

## ವಾರದ ಪ್ರಶ್ನೆ

ಜಗದೀಶ ಬಿ. ಹೊಸೂರು, ಮೈಸೂರು
ಪೌರೋಹಿತ್ಯ ಮಾಡುವಾಗ ಅಂಗಿ ಧರಿಸದಿರುವ ಕಾರಣವೇನು?
ಅರಿಶಿಣ, ಕುಂಕುಮ, ತುಪ್ಪಗಳ ಕರೆ ಮೆತ್ತಿ ಡ್ರೈಕ್ಲೀನ್ ಖರ್ಚು ದುಬಾರಿಯಾಗುವುದರಿಂದ.

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ
ಶ್ರೀಗಿಂತ ಶ್ರೀಮತಿಗೆ ಮೊದಲ ಆದ್ಯತೆ ಯಾಕೆ?
ಮತಿ ಇರುವುದರಿಂದ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ
ಪರಸ್ಪರ ಅವಲಂಬನೆ ಅಪಾಯ. ಹೌದಾ ಸರ್?
ಇಬ್ಬರಿಗೂ ನಶೆ ಏರಿದ್ದಾಗ ಮಾತ್ರ.

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು
ದೇಶವನ್ನು ಕಟ್ಟುತ್ತಿದ್ದೇವೆಯೇ ಅಥವಾ ಬಿಡಿಸುತ್ತಿದ್ದೇವೆಯೆ?
ವೈಯಕ್ತಿಕವಾಗಿ ಗಂಟು ಕಟ್ಟುತ್ತಿದ್ದೇವೆ; ಆಚಾರ, ವಿಚಾರಗಳಿಂದ ಬಿಡಿಸುತ್ತಿದ್ದೇವೆ.

ಪಿ. ಜಯವಂತ ಪೈ, ಕುಂದಾಪುರ
ಕಲ್ಲಿಗೂ ಮೈಲಿಗಲ್ಲಿಗೂ ವ್ಯತ್ಯಾಸವೇನು?




ಕಲ್ಲು ಜಂಗಮ; ಮೈಲಿಗಲ್ಲು ಅಳಿವಿಲ್ಲದ ಸ್ಥಾವರ.

ಜಗದೀಶ ಬಿ. ಹೊಸೂರು, ಮೈಸೂರು
ಹಿಂದಿ ಹೇರಿಕೆ ಎನ್ನುವವರೇ 'ಪ್ರತಿ ಮನೆ ತ್ರಿವರ್ಣ' ಎನ್ನದೆ 'ಹರ್ ಘರ್ ತಿರಂಗ್' ಎನ್ನುತ್ತಿರುವರಲ್ಲ?
ಅನ್ಯಭಾಷೆಯನ್ನು ಬೈಯುತ್ತಲೇ ಸಂಪೂರ್ಣ ಅಳವಡಿಸಿಕೊಳ್ಳುವುದು ಕನ್ನಡತನದ ಲಕ್ಷಣವಂತೆ.

ಬೂಕನಕೆರೆ ವಿಜೇಂದ್ರ, ಮೈಸೂರು
ಶ್ರೀಮಂತರ ನಗುವಿಗೂ, ಬಡವರ ನಗುವಿಗೂ ವ್ಯತ್ಯಾಸವೇನು?
ಶ್ರೀಮಂತರದು ಬಡ ನಗು; ಬಡವರದು ಶ್ರೀಮಂತ ನಗು.

■ ರಾಮ್